ಪದರಗಳು ಚಲಿಸಿ, ಅಂಗುಳಿನ ರಚನೆಯಾಗುತ್ತದೆ. ಈ ಸಂದರ್ಭದಲ್ಲಿ ಅಂಗುಳಿನ ಅಥವಾ ತುಟಿಯ ಭಾಗದಲ್ಲಿ ಯಾವುದೇ ಜೀವಕೋಶಗಳ ಕೊರತೆ ಯಿದ್ದಲ್ಲಿ ಅಥವಾ ಅಂಗುಳಿನ ಯಾವುದೇ ಭಾಗದಲ್ಲಿ ದುರ್ಮಾಂಸ ಬೆಳೆದಿದ್ದಲ್ಲಿ, ಅವುಗಳ ಚಲನೆಗೆ ಅಡ್ಡಿಯುಂಟಾಗಿ ಸೀಳು ತುಟಿ ಹಾಗೂ ಸೀಳು ಅಂಗುಳಿನ ರಚನೆಯಾಗುವ ಸಂಭವವಿರುತ್ತದೆ. ಇದು ಭ್ರೂಣಾವಸ್ಥೆಯ 12 ವಾರಗಳು ಅಂದರೆ 3 ತಿಂಗಳ ಒಳಗೆ ಸಂಭವಿಸುತ್ತದೆ.

30–35 ವರ್ಷಗಳಲ್ಲಿ ಗರ್ಭಧರಿಸುವಿಕೆ.

ಗರ್ಭಿಣಿ ಸ್ತ್ರೀಯರಲ್ಲಿ ಗರ್ಭಾವಸ್ಥೆಯ ಮೊದಲ ಮೂರು ತಿಂಗಳಲ್ಲಿ ಉಂಟಾಗುವ ದೈಹಿಕ ಹಾಗೂ ಮಾನಸಿಕ ಏರು ಪೇರುಗಳು.

ಗರ್ಭಿಣಿಯರಲ್ಲಿ 'ಎ' ಜೀವಸತ್ವದ ಹಾಗೂ ಫೋಲಿಕ್ ಆಮ್ಲದ ಕೊರತೆ.

ಗರ್ಭಿಣಿಯರು ಅತಿಯಾಗಿ ಧೂಮಪಾನ ಹಾಗೂ ಮದ್ಯಪಾನ ಮಾಡುವುದು.

ಗರ್ಭಿಣಿಯರಲ್ಲಿ ಕಂಡುಬರುವ ಜರ್ಮನ್ ದಡಾರ ಹಾಗೂ ಸೀತಾಳೆ ಸಿಡುಬಿನಂತಹ ಕಾಯಿಲೆಗಳು.

ವಂಶಪಾರಂಪರ್ಯವಾಗಿ ಬರುವ ಸಾಧ್ಯತೆ.

ವಂಶವಾಹಿನಿಗಳ ತೊಂದರೆ.

**ತೊಂದರೆ ಏನು?**

ಸೀಳು ತುಟಿ ಹಾಗೂ ಸೀಳು ಅಂಗುಳು ಹೊಂದಿರುವ ಮಗುವು ಅನೇಕ ರೀತಿಯ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

ಹಾಲು/ ಆಹಾರ ಸೇವನೆಯಲ್ಲಿ ತೊಂದರೆ

ಕಿವಿ ಸೋರುವಿಕೆ, ಶ್ರವಣ ದೋಷ

ವಕ್ರ ದಂತಪಂಕ್ತಿ

ಸಿಂಡ್ರೋಮ್ ರೂಪದಲ್ಲಿ ಜೊತೆಯಲ್ಲಿ ಕಾಣಬಹುದಾದಂತಹ ಬುದ್ಧಿಮಾಂದ್ಯತೆ.

ಮಾತು ಹಾಗೂ ಭಾಷಾ ಬೆಳವಣಿಗೆಯಲ್ಲಿ ತೊಂದರೆ.

ಸೀಳು ತುಟಿ ಹಾಗೂ ಸೀಳು ಅಂಗುಳು ಮಾತಿನ ಮೇಲೆ ಪರಿಣಾಮ ಬೀರುವುದರಿಂದ, ಅದು ಸಂಪರ್ಕ ಮಾಧ್ಯಮದ ಮೇಲೆಯೂ ಪರಿಣಾಮವನ್ನು ಬೀರುತ್ತದೆ. ತುಟಿ ಹಾಗೂ ಅಂಗುಳು ಶಬ್ದಗಳ ಉಚ್ಚಾರಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಶ್ವಾಸಕೋಶದಿಂದ ಬರುವ ಗಾಳಿಯು ಗಂಟಲಿನ ಮುಖಾಂತರ ಬಾಯಿಗೆ ಬಂದು, ತುಟಿಗಳ ಹಾಗೂ ನಾಲಗೆಯ ಸಹಾಯದಿಂದ ನಮಗೆ ಬೇಕಾದ ಶಬ್ದಗಳಾಗಿ ಉಚ್ಚಸಲ್ಪಡುತ್ತವೆ. ತುಟಿಗಳ ಸಹಾಯ ದಿಂದ ಪ, ಬ, ಫ, ಭ ಹಾಗೂ ಮ ಶಬ್ದಗಳು ಉಚ್ಚರಿಸಲ್ಪಡುತ್ತವೆ. ಸೀಳು ತುಟಿಯ ತೊಂದರೆಯಿಂದಾಗಿ ಎರಡೂ ತುಟಿಗಳನ್ನು ಸೇರಿಸಿ ಕೊಂಡು ಈ ಅಕ್ಷರಗಳನ್ನು ಉಚ್ಚರಣೆ ಮಾಡಲು ಕಷ್ಟವಾಗುತ್ತದೆ.

**ತಪಾಸಣೆ -ಚಿಕಿತ್ಸೆ ಹೇಗೆ?**

ಸೀಳು ತುಟಿ ಹಾಗೂ ಸೀಳು ಅಂಗುಳು ಹೊಂದಿರುವ ಮಕ್ಕಳ ತಪಾಸಣೆಗೆ ತಜ್ಞರಾದ ಪ್ಲಾಸ್ಟಿಕ್ ಸರ್ಜನ್, ವಾಕ್ ಭಾಷ ತಜ್ಞರು, ದಂತಪೂರಣ ತಜ್ಞರು, ದಂತ ವೈದ್ಯರು, ಮನೋವೈದ್ಯರ ಅವಶ್ಯಕತೆಯಿದೆ.

ಸೀಳು ತುಟಿ ಹಾಗೂ ಸೀಳು ಅಂಗುಳನ್ನು ಶಸ್ತ್ರ ಚಿಕಿತ್ಸೆಯ ಮೂಲಕ ಸರಿಪಡಿಸಬಹುದಾಗಿದೆ. ಸೀಳು ತುಟಿಯ ಶಸ್ತ್ರಚಿಕಿತ್ಸೆ 3 ರಿಂದ 6 ತಿಂಗಳಿನೊಳಗೆ ಮಾಡಿದರೆ, ಸೀಳು ಅಂಗುಳಿನ ಶಸ್ತ್ರ ಚಿಕಿತ್ಸೆಯನ್ನು 9 ರಿಂದ 18 ತಿಂಗಳೊಳಗೆ ಮಾಡಲಾಗುತ್ತದೆ. ಶಸ್ತ್ರಚಿಕಿತ್ಸೆಯ ನಂತರ, ಕಡ್ಡಾಯವಾಗಿ ಹಾಗೂ ನಿರಂತರವಾಗಿ ಮಗುವಿಗೆ ವಾಕ್‌ಭಾಷಾ ತರಬೇತಿಯನ್ನು ನೀಡಿದಲ್ಲಿ, ಅದರ ಮಾತು ಹಾಗೂ ಭಾಷೆಯಲ್ಲಿ ಗಣನೀಯ ವ್ಯತ್ಯಾಸವನ್ನು ಕಾಣಬಹುದಾಗಿದೆ. ಮಗುವಿನ ಮಾತಿನಲ್ಲಿ ಸ್ಪಷ್ಟತೆಯನ್ನು ಸಹ ಕಾಣಬಹುದು.

(ವೈದ್ಯೆಯ ಸಂಪರ್ಕ : 9449323811)




# ಪುರುಷರಿಗೆ ಗೈನಕೋಮಾಸ್ಟಿಯಾ



ಗೈನಕೋಮಾಸ್ಟಿಯಾ ಹುಡುಗರಿಂದ ವಯಸ್ಸಾದವರಿಗೂ ಕಾಡುವ ಒಂದು ಮುಜುಗರ ಸಂಗತಿ, ಇಲ್ಲಿ ಎದೆಯ ಭಾಗ ಹೆಚ್ಚು ಉಬ್ಬಿನಂತಾಗಿರುತ್ತದೆ. ಇದು ಹುಡುಗರಲ್ಲಿ ಸಾಮಾನ್ಯವಾಗಿ 14–16 ರಲ್ಲಿ ಕಾಣಿಸಿಕೊಳ್ಳುತ್ತದೆ ಮತ್ತು ಸಾಮಾನ್ಯವಾಗಿ 1 ವರ್ಷದಲ್ಲಿ ಕಡಿಮೆಯಾಗಿ ಸರಿಹೋಗುತ್ತದೆ. ಆದರೆ ಕೆಲವರಲ್ಲಿ ಇದು ಹಾಗೆಯೇ ಉಳಿಯುತ್ತದೆ ಅಥವಾ ಗಾತ್ರದಲ್ಲಿ ಹೆಚ್ಚಾಗುತ್ತದೆ. ಇದರಿಂದ ಹುಡುಗರಿಗೆ ಸರಿಯಾದ ಉಡುಪುಗಳನ್ನು ಧರಿಸುವುದಕ್ಕೆ ತೊಂದರೆಯಾಗುತ್ತದೆ, ಆಟಗಳಲ್ಲಿ ಭಾಗವಹಿಸುವುದಕ್ಕೆ ಮುಜುಗರ, ಸ್ನೇಹಿತರ ಅಥವಾ ಸಂಬಂಧಿಕರ ಜೊತೆ ಬೆರೆಯಲು ಆತಂಕ ಹಾಗೂ ಮುಜುಗರವಾಗುತ್ತದೆ. ಮಾನಸಿಕ ಖಿನ್ನತೆಯಿಂದ ವ್ಯಾಸಂಗದಲ್ಲಿ ಹಿಂದುಳಿಯುವುದು, ಕೆಲಸದಲ್ಲಿ ಆಸಕ್ತಿ ಕಳೆದುಕೊಳ್ಳುವುದು ಸಾಮಾನ್ಯವಾಗಿರುತ್ತದೆ.

ಆಹಾರದಲ್ಲಿ ಎಣ್ಣೆ ಕಡಿಮೆ ಮಾಡುವುದು ಹಾಗೂ ವ್ಯಾಯಾಮ ಮಾಡುವುದರಿಂದ ಯಾವುದೇ ಬದಲಾವಣೆಗಳು ಇರುವುದಿಲ್ಲ. ಯಾಕೆಂದರೆ ಆ ಜಾಗದಲ್ಲಿ ಕೊಬ್ಬು ಕರಗದೆ ಇರುವುದು ಮತ್ತು ಗ್ರಂಥಿಗಳು ಗಾತ್ರದಲ್ಲಿ ದೊಡ್ಡದಾಗಿರುವುದರಿಂದ ನೈಸರ್ಗಿಕ ವಿಧಾನಗಳಲ್ಲಿ ಬದಲಾವಣೆ ಸಾಧ್ಯವಿರುವುದಿಲ್ಲ.

ಲೈಪೋಸಕ್ಷನ್ ಮತ್ತು ಗ್ರಂಥಿಗಳನ್ನು ಪೂರ್ಣವಾಗಿ ತೆಗೆಯುವುದರಿಂದ ಈ ಸಮಸ್ಯೆಯಿಂದ ಜೀವನ ಪರ್ಯಂತ ಪರಿಹಾರ ಕಂಡುಕೊಳ್ಳಬಹುದು. ಇದು ಒಂದು ದಿನದ ಕಾಸ್ಮೆಟಿಕ್ ಸರ್ಜರಿಯಾಗಿದ್ದು, ಮರುದಿನದಿಂದ ದೈನಂದಿನ ಕರ್ತವ್ಯಗಳಲ್ಲಿ ಭಾಗವಹಿಸಬಹುದು. ಸರಿಯಾದ ಉಡುಪುಗಳನ್ನು ಧರಿಸಿ ಖಿನ್ನತೆಯಿಂದ ಹೊರಬರಬಹುದು.

ಇನ್ನಿತರೆ ಸೇವೆಗಳು : ಸ್ತನಗಳ ಗಾತ್ರ ಹೆಚ್ಚಿಸುವುದು / ಕಡಿಮೆ ಮಾಡುವುದು, ಬೊಜ್ಜುತನಕ್ಕೆ ಸರ್ಜರಿ, ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಮೂಗಿನ ವಿಕಾರತೆ ಸರಿಪಡಿಸುವುದು, ಕೆನ್ನೆಗುಳಿ, ಮುಖದ ಕಾಸ್ಮೆಟಿಕ್ ಸರ್ಜರಿಗಳು, ಇತ್ಯಾದಿ...

**ಡಾ : ಗಿರೀಶ್ ಎ. ಸಿ., ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್, ಕರ್ಲ್ಸ್ ಮತ್ತು ಕರ್ವ್ಸ್ ಹೇರ್ ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ರಾಜಾಜಿನಗರ ಮತ್ತು ಕೋರಮಂಗಲ, ಬೆಂಗಳೂರು.**

www.curlsncurves.com

8088400400 9448571216

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು

**ಹೆಚ್ಚಿನ ಮಾಹಿತಿಗಾಗಿ ದಿನಾಂಕ 27.02.17 ಸೋಮವಾರ ಮಧ್ಯಾಹ್ನ 1.30ಕ್ಕೆ ಪಬ್ಲಿಕ್ ನ್ಯೂಸ್ ಚಾನಲ್ ವೀಕ್ಷಿಸಿ**